ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 144 /2021
ಪಿ.ಡಬ್ಲ್ಯೂ : 1

ದಿನಾಂಕಃ 06-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಮ್ ಜೆ ಎಸ್ ವಕೀಲರಿಂದ

1. 1978 ರಲ್ಲಿ ಬಸ್ರೂರಿನ ಶಾರದ ಕಾಲೇಜಿನಲ್ಲಿ ಪದವಿ ಮುಗಿಸಿರುತ್ತೇನೆ. ಬಿ .ಎ ಪದವಿ ನಂತರ ಎಸ್ ಬಿ ಎಮ್. ಇಂಜಿನಿಯರ್ ಕಂಪೆನಿಯಲ್ಲಿ ನೌಕರಿಗೆ ಸೇರಿರುತ್ತೇನೆ. 1984 ರವರಗೂ ಮುಂಬೈಯಲ್ಲಿ ನೌಕರಿಯಲ್ಲಿಯೇ ಇದ್ದೆ. 1984 ರಿಂದ 2021 ರವರೆಗೆ ಆರ್ ಎನ್ ಶೆಟ್ಟಿ ಕಂಪೆನಿಯಲ್ಲಿ ಕೆಲಸಕ್ಕೆ ಇದ್ದೆ. ಮುಂಬೈ ದೆಲ್ಲಿ ಹಾಗೂ ಬೇರೆ ಬೇರೆ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದೆ. 2021 ರಲ್ಲಿ ನಾನು ಕೆಲಸದಿಂದ ನಿವೃತ್ತಿ ಹೊಂದಿರುತ್ತೇನೆ. 2021 ನೇ ಇಸವಿಯಲ್ಲಿ ನಿವೃತ್ತಿ ಹೊಂದಿದ ನಂತರ ಆನಗಳ್ಳಿಯ ಕಂಟತಾರುವಿನ ತಮ್ಮ ಹೆಂಡತಿ ಮನೆಯಲ್ಲಿ ವಾಸವಿರುತ್ತೀರಾ ಎಂದರೆ ಸಾಕ್ಷಿ ಅಲ್ಲಿಯೂ ವಾಸವಾಗಿದ್ದೆ ಬಸ್ರೂರು, ಆನಗಳ್ಳಿ ಹಾಗೂ ಎಲ್ಲಾ ಕಡೆ ವಾಸವಿದ್ದೆ ಎಂದು ನುಡಿಯುತ್ತಾರೆ.

2. ನನ್ನ ವಾಸ್ತವ್ಯ ದಾಖಲೆಗಳಾದ ಆಧಾರ್ ಕಾರ್ಡ್ ಹಾಗೂ ರೇಶನ್ ಕಾರ್ಡ್ ನನ್ನ ಮನೆಯ ವಿಳಾಸ ಆನಗಳ್ಳಿಯ ಕಂಟತಾರುವಿನಲ್ಲಿ ಇರುತ್ತದೆ. ಚುನಾವಣೆ ಚೀಟಿಯಲ್ಲಿ ನನ್ನ ವಾಸ್ತವ್ಯದ ಸ್ಥಳ ಹೆಬ್ರಿ ತಾಲೂಕಿನ ಬೇಳಂಜೆಯಲ್ಲಿ ಇರುತ್ತದೆ.ನಾನು ಬಳ್ಕೂರು ಗ್ರಾಮದಲ್ಲಿ ವಾಸವಿರುವ ಬಗ್ಗೆ ಈಗಿನ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ.

3. 1 ನೇ ಪ್ರತಿವಾದಿ ರಾಜೀವ ಶೆಟ್ಟಿಯವರ ಉದ್ಯೋಗ ಕೃಷಿ ಆಗಿರುತ್ತದೆ. ಅವರು ಮದುವೆ ಆಗಿ ಸುಮಾರು 50 ವರ್ಷಗಳು ಆಗಿರುತ್ತದೆ ಎಂದರೆ ಸರಿ. ರಾಜೀವ ಶೆಟ್ಟಿಯವರು ಮದುವೆ ಆದ ನಂತರ ಅವರು ಬಳ್ಕೂರು ಗ್ರಾಮದ ಗುತ್ತಿಗೇರಿ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿ 1980 ರಿಂದ ಅವರು ಅಲ್ಲಿ ವಾಸವಿರುತ್ತಾರೆ, ಅದಕ್ಕೂ ಪೂರ್ವದಲ್ಲಿ ನಾನು ಅಲ್ಲಿ ವಾಸವಿದ್ದೆ ಎಂದು ನುಡಿಯುತ್ತಾರೆ. 1980 ರ ಹಿಂದೆ ಬಳ್ಕೂರಿನಲ್ಲಿ ವಾಸವಿದ್ದೆ ಎಂದು ತೋರಿಸಲು ಪಡಿತರ ಚೀಟಿ ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ.

4. ಶೈಕ್ಷಣೀಕ ದಾಖಲೆ ನೋಡಿದಾಗ ಕಾರ್ಕಳ ಗ್ರಾಮದ ಬೆಳ್ಳಂಜೆ ನಿವಾಸಿ ಎಂದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಇಲ್ಲಿ ಇದ್ದ ಬಗ್ಗೆ ದಾಖಲೆಗಳು ಇವೆ ಎಂದು ನುಡಿಯುತ್ತಾರೆ. ಶೈಕ್ಷಣೀಕ ದಾಖಲೆಗಳಲ್ಲಿ ತಾನು ಬಳ್ಕೂರಿನ ನಿವಾಸಿ ಬೆಳ್ಳಂಜೆ ನಿವಾಸಿಯಲ್ಲ ಎಂದು ತೋರಿಸಲು ದಾಖಲೆ ಹಾಜರು ಪಡಿಸಬಹುದಾ ಎಂದರೆ ಸಾಕ್ಷಿ ಹಾಜರು ಪಡಿಸಬಹುದು ಎಂದು ನುಡಿಯುತ್ತಾರೆ. ನಾನಾಗಲಿ, 2 ನೇ ಪ್ರತೀವಾದಿ ಬಳ್ಕೂರಿನ ನಿವಾಸಿಗಳಲ್ಲ ಎಂದರೆ ಸರಿಯಲ್ಲ.

5. ಬಳ್ಕೂರಿನ ಗುತ್ತಿಕೇರಿ ಮನೆ ನನ್ನ ತಂದೆಯಾದ ಸೂರಪ್ಪ ಶೆಟ್ಟಿಯವರು ಕುಟುಂಬದ ಮನೆಯಾಗಿರುತ್ತದೆ ಎಂದರೆ ಸರಿ. ಅವರ ಕುಟುಂಬದ ವಿಭಾಗ ಪತ್ರದಂತೆ ದಾವಾ ಎ ಶೆಡ್ಯೂಲ್ ಸ್ವತ್ತು ನನ್ನ ತಂದೆ ಸೂರಪ್ಪ ಶೆಟ್ಟಿಯವರಿಗೆ ಬಂದಿರುತ್ತದೆ ಎಂದರೆ ಸರಿ. ಬೆಳ್ಳಂಜೆಯಲ್ಲಿ ನನ್ನ ತಾಯಿಗೆ ಅವರ ಅಳಿಯ ಸಂತಾನದ ಆಸ್ತಿ ಇರುತ್ತದೆ. ನನ್ನ ತಂದೆ ಸೂರಪ್ಪ ಶೆಟ್ಟಿಯವರು ಅವರ ಜೀವಿತ ಕಾಲದಲ್ಲಿ ಬೆಳ್ಳಂಜೆಯಲ್ಲಿ ಕೆಲವು ಆಸ್ತಿಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಬೆಳ್ಳಂಜೆ ಗ್ರಾಮದ ಆಸ್ತಿಗಳು ನಮ್ಮ ತಂದೆ ತಾಯಿ ಮೃತರಾದ ನಂತರ ತಮ್ಮ ಮತ್ತು ಪ್ರತಿವಾದಿಗಳ ಜಂಟಿ ಹಕ್ಕಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

6. 1 ನೇ ಪ್ರತಿವಾದಿ ಈ ದಾವೆಯಲ್ಲಿ ಸಲ್ಲಿಸಿರುವ ಲಿಖಿತ ತಕರಾರು ನಾನು ತಿಳಿದುಕೊಂಡಿರುತ್ತೇನೆ. ಬಿ ಶೆಡ್ಯೂಲ್ ನಲ್ಲಿ ನನ್ನ ಹಾಗೂ 1 ಮತ್ತು 2 ನೇ ಪ್ರತಿವಾದಿಗಳ ಜಂಟೀ ಹಕ್ಕಿನಲ್ಲಿರುವ ಆಸ್ತಿಗಳನ್ನು ನಮೂದಿಸಿರುತ್ತಾರೆ ಎಂದರೆ ಸರಿ. ಬೆಳ್ಳಂಜೆ ಗ್ರಾಮದ ಆಸ್ತಿಗಳು 2006 ರ ಮುಂಚೆ ಕರುಣಾಕರ ಶೆಟ್ಟಿಯವರ ಸ್ವಾಧೀನದಲ್ಲಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2006 ನೇ ಇಸವಿಯಲ್ಲಿ ದಾವಾ ಎ ಶೆಡ್ಯೂಲ್ ಆಸ್ತಿ ಹಾಗೂ 1 ನೇ ಪ್ರತಿವಾದಿಯ ಲಿಖಿತ ತಕರಾರಿನಲ್ಲಿ ನಮೂದಿಸಿದ ಬಿ ಶೆಡ್ಯೂಲ್ ಆಸ್ತಿಯ ಬಗ್ಗೆ ನಮ್ಮ ನಮ್ಮಲ್ಲಿ ವಿಭಾಗದ ಮಾತುಕತೆ ಆಗಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಿಭಾಗದ ಮಾತುಕತೆಯಲ್ಲಿ ದಾವಾ ಎ ಶೆಡ್ಯೂಲ್ ಹಾಗೂ ಬೆಳ್ಳಂಜೆ ಗ್ರಾಮದ ಆಸ್ತಿ 1 ನೇ ಪ್ರತಿವಾದಿಯ ಹಿಸ್ಸೆಗೆ ಹೋಗುವಂತೆ ಹಾಗೂ ಉಳಿದ ಬೆಳ್ಳಂಜೆ ಗ್ರಾಮದ ಆಸ್ತಿಗಳನ್ನು ನನ್ನ ಹಾಗೂ 2 ನೇ ಪ್ರತಿವಾದಿಯ ಹಿಸ್ಸೆಗೆ ಹೋಗುವಂತೆ ಆಗಿರುತ್ತದೆ ಎಂದರೆ ಸರಿಯಲ್ಲ.

7. ಆ ಮಾತುಕತೆ ಆಡಿದ್ದು, ರಾಜೀವ ಶೆಟ್ಟಿ, ಗುಲ್ವಾಡಿಯ ಜಿ.ಸೀತಾರಾಮ ಶೆಟ್ಟಿಯವರ ನಡುವೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2006 ನೇ ಇಸವಿಯಲ್ಲಿ ದಾವಾ

ಎ ಶೆಡ್ಯೂಲ್ ಆಸ್ತಿ ಹಾಗೂ ಲಿಖಿತ ತಕರಾರಿನ ಬಿ ಶೆಡ್ಯೂಲ್ ಸ್ವತ್ತುಗಳ ಪಹಣಿ ಪತ್ರಿಕೆಗಳು ಬೇರೆಯವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಮಾತುಕತೆಯಲ್ಲಿ ಬಳ್ಕೂರಿನ ಆಸ್ತಿಯಲ್ಲಿ ಕಂದಾಯ ದಾಖಲೆಗಳನ್ನು 1 ನೇ ಪ್ರತಿವಾದಿ ದುರಸ್ತಿ ಪಡಿಸಬೇಕು ಹಾಗೂ ಬೇಳಂಜೆ ಗ್ರಾಮದ ಆಸ್ತಿಯ ಕಂದಾಯ ದಾಖಲೆಗಳನ್ನು ನಾನು ಹಾಗೂ 2 ನೇ ಪ್ರತಿವಾದಿ ದುರಸ್ತಿ ಪಡಿಸಬೇಕು ಅಂತ ಇತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

8. 2006 ನಂತರ ಬಳ್ಕೂರಿನ ದಾವಾ ಎ ಶೆಡ್ಯೂಲ್ ಆಸ್ತಿಯ ಬಾಬ್ತು ಕಂದಾಯ ದಾಖಲೆಗಳು ದುರಸ್ತಿ ಆದ ಬಗ್ಗೆ ನನಗೆ ಗೊತ್ತಿರುತ್ತದೆ. ಬಳ್ಕೂರು ಗ್ರಾಮದ ದಾವಾ ಎ ಶೆಡ್ಯೂಲ್ ನ ಆಸ್ತಿಯಲ್ಲಿ ಹಳೆ ಮನೆ ಇತ್ತು. ಅದನ್ನು ನನ್ನ ತಂದೆಯ ತಂದೆ ಕಟ್ಟಿರುತ್ತಾರೆ. 2006 ನೇ ಇಸವಿಗೆ ಆ ಮನೆ ತುಂಬಾ ಹಳೆಯದಾಗಿತ್ತು ಎಂದರ ಸರಿ. ಆ ಮನೆಯಲ್ಲಿ 1 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಮಕ್ಕಳು ವಾಸವಿದ್ದರಾ ಎಂದರೆ ಸಾಕ್ಷಿ ಎಲ್ಲರೂ ವಾಸವಿದ್ದೇವು ಎಂದು ನುಡಿಯುತ್ತಾರೆ. ಆ ಮನೆಯ ನಂಬರ್ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಮನೆಯ ಬಾಬ್ತುವಿನ ದಾಖಲೆ ಪರಿಶೀಲನೆ ಮಾಡಿದರೆ ಮನೆಯ ದಾಖಲೆಗಳಲ್ಲಿ 1 ನೇ ಪ್ರತಿವಾದಿಗಳು ಹಾಗೂ ಆತನ ಹೆಂಡತಿ ಮಕ್ಕಳಿನ ಹೆಸರು ಕಂಡು ಬರುತ್ತದೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ .

9. ಆ ಸಮಯದಲ್ಲಿ ಬೆಳ್ಳಂಜೆ ಗ್ರಾಮದ ಆಸ್ತಿಯಲ್ಲಿ ಮನೆಯನ್ನು ನನ್ನ ತಾಯಿಯ ಹಿರಿಯರು ಕಟ್ಟಿರುತ್ತಾರೆ. ಈಗಲೂ ಆ ಮನೆ ಇರುತ್ತದೆಯಾ ಎಂದರೆ ಸಾಕ್ಷಿ ಬಿದ್ದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಬೆಳ್ಳಂಜೆ ಗ್ರಾಮದ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಒಂದು ಮನೆ ಇದ್ದು, ಅದರಲ್ಲಿ 2 ನೇ ಪ್ರತಿವಾದಿ ವಾಸವಿರುತ್ತಾರೆ ಎಂದರೆ ಸರಿ. ದಾವಾ ದಾಖಲು ಮಾಡುವುದರ ಬಗ್ಗೆ ಎ ಶೆಡ್ಯೂಲ್ ಆಸ್ತಿಯ ಬಾಬ್ತು RTC ಗಳನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

10. ವ್ಯಾಜ್ಯ ಹಾಕಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ವ್ಯಾಜ್ಯ ಹಾಕುವಾಗ ದಾವಾ ಎ ಶೆಡ್ಯೊಲ್ ಸ್ವತ್ತು ಹಾಗೂ 1 ನೇ ಪ್ರತಿವಾದಿಯ ಲಿಖಿತ ತಕರಾರಿನಲ್ಲಿ ನಮೂದಿಸಿರುವ ಬಿ ದಾವಾ ಸ್ವತ್ತುಗಳು ವಿಭಾಗಕ್ಕೆ ಲಭ್ಯ ಇರುವಂತಹ ಆಸ್ತಿಗಳು ಎಂದು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ನನ್ನ ತಂದೆಯ ತಂದೆ ಕಟ್ಟಿಸಿದ ಮನೆ ಹಂಚು ಚಾವಣಿ ಮನೆ ಆಗಿತ್ತು. ಆ ಮನೆಯನ್ನು ಯಾವಾಗ ಕೆಡವಿದ್ದು ಎಂದರೆ ಸಾಕ್ಷಿ ಕೆಡವಿರುವುದಿಲ್ಲ, ಈಗಲೂ ಇರುತ್ತದೆ ಎಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸುವಾಗ

ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ಎರಡು ಮನೆಗಳು ಇರುತ್ತದೆ ಎಂದು ಹೇಳಿರುತ್ತೇನೆ. 2 ನೇ ಮನೆಯನ್ನು 5-6 ವರ್ಷಗಳ ಹಿಂದೆ ನಿರ್ಮಾಣ ಮಾಡಲಾಗಿತ್ತು. ಸಾಕ್ಷಿ ಸರ್ವೆ ನಂಬರ್ ಗೊತ್ತಿರುತ್ತದೆ ಎಂದು ನುಡಿದು,ಪುನಃ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

11. ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ಒಂದು 44 ಸೆಂಟ್ಸ್ ಹಾಗೂ 10 ಸೆಂಟ್ಸ್ ಜಾಗದಲ್ಲಿ 1 ನೇ ಪ್ರತಿವಾದಿ ನಾನು ಮನೆ ಕಟ್ಟುತ್ತೇನೆ, ಬೇರೆ ಜಾಗ ಅದಕ್ಕೆ ಪ್ರತಿಯಾಗಿ ಕೊಡುತ್ತೇನೆ ಎಂದು ಹೇಳಿರುತ್ತಾರೆ. ಮನೆ ಕಟ್ಟುವಾಗ ನಮ್ಮ ಬಳಿ ಒಪ್ಪಿಗೆ ಕೇಳಿರುತ್ತಾರೆ. ನಾನು ಒಪ್ಪಿಗೆ ಕೊಟ್ಟಿರುತ್ತೇನೆ. ಪ್ರತಿವಾದಿ 1 ರವರು ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ಮನೆ ಕಟ್ಟುವ ಪೂರ್ವದಲ್ಲಿ ನಾನು ಹಾಗೂ 2 ನೇ ಪ್ರತಿವಾದಿ ಒಪ್ಪಿ ಗೆ ಕೊಟ್ಟಿರುತ್ತೇವೆ. ಉದಯ ಕುಮಾರ್ ಶೆಟ್ಟಿ ವಕೀಲರ ಬಳಿ ಒಂದು ದಾಖಲೆ ಮಾಡಿಕೊಟ್ಟಿರುತ್ತೇವೆ.ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿ, ಸಾಕ್ಷಿ ದಾಖಲೆ ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನು ನಿ.ಡಿ.**1** ಎಂದು ಗುರುತಿಸಲಾಯಿತು. ಸದರಿ ದಾಖಲೆ ಸಾಮಾನ್ಯ ಅಧಿಕಾರ ಪತ್ರ ಆಗಿರುತ್ತದೆ. ಸದರಿ ದಾಖಲೆಗಳಲ್ಲಿ ಕಾಣುವ ಸಹಿಗಳು ನನ್ನದೇ ಎಂದರೆ ಸರಿ. ಸದರಿ ಸಹಿಗಳನ್ನು ನಿ.ಡಿ.**1 (ಎ)** ರಿಂದ ನಿ.ಡಿ. **1(ಡಿ)** ಎಂದು ಗುರುತಿಸಲಾಯಿತು.

12. ನಿ.ಡಿ.1 ರ ಪ್ರಕಾರ 2 ನೇ ಪ್ರತಿವಾದಿ ಒಂದು ಉಪನೊಂದಾಣಾಧಿಕಾರಿಯವರ ಕಚೇರಿಯಲ್ಲಿ ಒಂದು ರಿಲೀಸು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳಿದ್ದರಿಂದ ಅದನ್ನು ನಿ.ಡಿ. **2** ಎಂದು ಗುರುತಿಸಲಾಯಿತು. ನಿ.ಡಿ.2 ಪ್ರಕಾರ ದಾವಾ 10 ಮತ್ತು 12 ರ ಆಸ್ತಿಗಳಲ್ಲಿ ಪಹಣಿ ಪತ್ರಿಕೆ ಬದಲಾಗಿದೆ ಎಂದರೆ ಸರಿ.

ಈ ಸಂದರ್ಭದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ